ಚಿತ್ರಗಳು: ಎಸ್.ವಿ. ಹೂಗಾರ



ಇಂದಿರಾಗಾಂಧಿ ಇಂಟರ್ ನ್ಯಾಶನಲ್ ಟರ್ಮಿನಲ್‌ನಲ್ಲಿ ಬೋರ್ಡಿಂಗ್ ಆಗಲು ಆ ಪುಟ್ಟ ವಿಮಾನದ ಕಡೆ ನಡೆಯುತ್ತಿದ್ದಾಗ ನನ್ನೆದೆಯಲ್ಲಿ ಸಣ್ಣದಾದ ನಡುಕ ಉಂಟಾಗಿತ್ತು. ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟು ಹೊರಡುವಾಗ ರಾಘವ ಪಂತುಲು ನನ್ನ ಹೆಗಲ ಮೇಲೆ ಕೈ ಇಟ್ಟು, 'ಬನಾರಸ್ ವಿಮಾನ ನಿಲ್ದಾಣದ ರನ್‌ವೇ ಚಿಕ್ಕದಾಗಿರುವುದರಿಂದ ಅಲ್ಲಿಗೆ ದೊಡ್ಡ ವಿಮಾನಗಳ ಹಾರಾಟ ಇರುವುದಿಲ್ಲ. ಜೊತೆಗೆ ಬನಾರಸ್‌ಗೆ ರೆಗ್ಯುಲರ್ ಆಗಿ ವಿಮಾನ ಹಾರಾಟವಿಲ್ಲ. ಆಕಾಶದಲ್ಲಿ ಹಾರಾಡುವಾಗ ವಿಮಾನ ದೊಡ್ಡದಿರಲಿ, ಸಣ್ಣದಿರಲಿ ಒಂದೇ ರೀತಿ ಕಾರ್ಯನಿರ್ವಹಿಸುತ್ತವೆ. ನಿನಗೇನಾದರೂ ಭಯವಾದರೆ ಕಣ್ಮುಚ್ಚಿಕೊಂಡು ನೀಲಾಂಜನಾಳ ಹೆಗಲ ಮೇಲೆ ತಲೆ ಇಟ್ಟು ನಿದ್ದೆಗೆ ಜಾರಿಬಿಡು. ಅಷ್ಟೆ, ಒಂದೂಕಾಲು ಗಂಟೆಯಲ್ಲಿ ನೀನು ಬನಾರಸ್‌ನ ಕಾಶಿವಿಶ್ವನಾಥನ